**ಮೆ: ಹೊರೈಜನ್ ಮೈನಿಂಗ್, ಸರ್ವೆ.ನಂ-99, ಕೋಳೂರು ಗ್ರಾಮ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ ಇಲ್ಲಿ 8.12 ಎಕರೆ ಪ್ರದೇಶದಲ್ಲಿ ವಾರ್ಷಿಕ 65,200 ಟನ್ ಸಾಮರ್ಥ್ಯದ ಉದ್ದೇಶಿತ ಸಾಮಾನ್ಯ ಮರಳು ಗಣಿಗಾರಿಕೆ ಯೋಜನೆಯ ಸಂಬಂಧ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.**

ದಿನಾಂಕ : 23-07-2020.

ಸಮಯ : ಬೆಳಿಗ್ಗೆ 11.00 ಘಂಟೆ.

ಸ್ಥಳ: ಯೋಜನಾ ಸ್ಥಳ, ಮೆ: ಹೊರೈಜನ್ ಮೈನಿಂಗ್, ಸರ್ವೆ.ನಂ-99, ಕೋಳೂರು ಗ್ರಾಮ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ.

| | |
|---|---|
| ಹಾಜರಿದ್ದ ಅಧಿಕಾರಿಗಳ ವಿವರ | **ಅನುಬಂಧ-1** |
| ಯೋಜನೆಯ ಪರವಾಗಿ ಹಾಜರಿದ್ದ ಪ್ರತಿನಿಧಿಗಳ ವಿವರ | **ಅನುಬಂಧ-2** |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | **ಅನುಬಂಧ-3** |
| ಪರಿಸರ ಸಾರ್ವಜನಿಕ ಸಭೆಯ ಬಗ್ಗೆ ನೀಡಿದ ಪತ್ರಿಕಾ ಪ್ರಕಟಣೆಯ ವಿವರಗಳು | **ಅನುಬಂಧ-4** |

**ಪೀಠಿಕೆ:**

ಮೆ: ಹೊರೈಜನ್ ಮೈನಿಂಗ್ ಇವರು ಸರ್ವೆ.ನಂ-99, ಕೋಳೂರು ಗ್ರಾಮ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ ಇಲ್ಲಿ 8.12 ಎಕರೆ ಪ್ರದೇಶದಲ್ಲಿ ವಾರ್ಷಿಕ 65,200 ಟನ್ ಸಾಮರ್ಥ್ಯದ ಸಾಮಾನ್ಯ ಮರಳು ಗಣಿಗಾರಿಕೆಯನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ.

ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ ಇವರು ಜಾರಿಗೊಳಿಸಿರುವ ಪರಿಸರ ಆಘಾತ ಅಧ್ಯಯನ ಅಧಿಸೂಚನೆ, 2006 ರ ಅನ್ವಯ ಸದರಿ ಯೋಜನೆಗೆ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ. ಈ ಸಂಬಂಧ ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ-ಕರ್ನಾಟಕ [State Level Environment Imapact Assessment Authority-Karnataka (SEIAA)] ಇವರು ಪತ್ರ ಸಂಖ್ಯೆ: SEIAA 673 MIN 2019 ದಿನಾಂಕ: 18.01.2020 ರಂದು Standard Terms Of Reference ಅನ್ನು ನೀಡಿರುತ್ತಾರೆ. ಅದರಂತೆ ಸದರಿ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಲಾಗಿರುತ್ತದೆ.

ಪರಿಸರ ಆಘಾತ ಅಧ್ಯಯನ ಅಧಿಸೂಚನೆ, 2006 ರ ಅನ್ವಯ ಸದರಿ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವ ಮೂವತ್ತು (30) ದಿನಗಳ ಮೊದಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಜ್ಯ ಮಟ್ಟದ ದಿನ ಪತ್ರಿಕೆಗಳಾದ "ಸಂಯುಕ್ತ ಕರ್ನಾಟಕ" (ಕನ್ನಡ), " ದಿ ಟೈಮ್ಸ್ ಆಫ್ ಇಂಡಿಯಾ"

(ಆಂಗ್ಲ ಭಾಷೆ)ದಲ್ಲಿ ದಿನಾಂಕ: 21-06-2020 ರಂದು ಹಾಗೂ ಸ್ಥಳೀಯ ದಿನ ಪತ್ರಿಕೆ "ಸುದ್ದಿಮೂಲ" ದಲ್ಲಿ ದಿನಾಂಕ: 23-06-2020 ರಂದು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ-ಟಿಪ್ಪಣಿಗಳು ಹಾಗೂ ಅಹವಾಲುಗಳನ್ನು ನೇರವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಜಿಲ್ಲಾಧಿಕಾರಿಗಳು ರಾಯಚೂರು ಜಿಲ್ಲೆ ಇವರಿಗೆ ಸಲ್ಲಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು. ಮುಂದುವರೆದು ಸದರಿ ಯೋಜನೆಯ ಕರಡು ಪರಿಸರ ಆಘಾತ ಅಧ್ಯಯನ ವರದಿ ಮತ್ತು ಕಾರ್ಯಕಾರಿ ಸಾರಾಂಶವನ್ನು ಈ ಕೆಳಕಂಡ ಕಛೇರಿಗಳಲ್ಲಿ ಸಾರ್ವಜನಿಕರ ಪರಾಮರ್ಷೆಗೆ ಇಡಲಾಗಿತ್ತು.

೧. ಜಿಲ್ಲಾಧಿಕಾರಿಗಳ ಕಾರ್ಯಾಲಯ, ರಾಯಚೂರು.
೨. ಜಿಲ್ಲಾ ಪಂಚಾಯತ್ ಕಾರ್ಯಾಲಯ, ರಾಯಚೂರು.
೩. ಜಿಲ್ಲಾ ಕೈಗಾರಿಕಾ ಕೇಂದ್ರ, ರಾಯಚೂರು.
೪. ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ರಾಯಚೂರು.
೫. ನಗರ ಸಭೆ ಕಾರ್ಯಾಲಯ, ದೇವದುರ್ಗ, ರಾಯಚೂರು ಜಿಲ್ಲೆ.
೬. ಗ್ರಾಮ ಪಂಚಾಯತ್ ಕಾರ್ಯಾಲಯ, ಹೇಮನಾಳ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ.
೭. ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, 7ನೇ ಮಹಡಿ, 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು.
೮. ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ. 49, ಪರಿಸರ ಭವನ, ಚರ್ಚ್‌ಸ್ಟ್ರೀಟ್, ಬೆಂಗಳೂರು.

ಮೊದಲಿಗೆ ಶ್ರೀ. ಎಂ.ಶ್ರೀಧರ್, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ರಾಯಚೂರು ಹಾಗೂ ಹಿರಿಯ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ವಲಯ ಕಛೇರಿ, ಬಳ್ಳಾರಿ ಇವರು ಸಭೆಯ ಉದ್ದೇಶವನ್ನು ತಿಳಿಸಿ ಜಿಲ್ಲಾಧಿಕಾರಿಗಳನ್ನು ಪ್ರತಿನಿಧಿಸಿದ್ದ ಶ್ರೀ. ದುರಗೇಶ್, ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ರಾಯಚೂರು ಜಿಲ್ಲೆ ಇವರನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಇತರೆ ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು, ಮಾಧ್ಯಮ ಪ್ರತಿನಿಧಿಗಳನ್ನು ಸಭೆಗೆ ಆಹ್ವಾನಿಸಿ, ಶ್ರೀ. ದುರಗೇಶ್, ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ರಾಯಚೂರು ಜಿಲ್ಲೆ ಇವರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಬೇಕೆಂದು ಹಾಗೂ ಸಭೆಯನ್ನು ನಡೆಸಿಕೊಡಬೇಕೆಂದು ಕೋರಿದರು. ಸಭಾಧ್ಯಕ್ಷರು ಮಾತನಾಡಿ ಸದರಿ ಯೋಜನೆಯ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಅಳವಡಿಸಬಹುದಾದಂತಹ ಮಾಲಿನ್ಯ ನಿಯಂತ್ರಣ ಕ್ರಮಗಳ ಬಗ್ಗೆ ವಿವರವಾದ ವರದಿಯನ್ನು ಸಾರ್ವಜನಿಕರಿಗೆ ತಿಳಿಸುವಂತೆ ಯೋಜನೆಯ ಪ್ರತಿನಿಧಿಗಳಿಗೆ ಸೂಚಿಸಿದರು.

ಸದರಿ ಯೋಜನೆಯ ಮಾಲೀಕರಾದ ಶ್ರೀ. ಧನರಾಜ್ ಭಾರತಿ ನರಸಿಂಹರವರು ಯೋಜನೆಯ ಹಾಗೂ ಕಾರ್ಯಚಟುವಟಿಕೆಗಳ ಬಗ್ಗೆ ವಿವರಗಳನ್ನು ಶಕ್ತಿ ಬಿಂದು ಪ್ರದರ್ಶನ (Power Point Presentation) ದಲ್ಲಿ ಸಭೆಗೆ ಮಂಡಿಸಿದರು. ಸದರಿ ವಿವರಗಳನ್ನು **ಅನುಬಂಧ-5** ರಲ್ಲಿ ಲಗತ್ತಿಸಲಾಗಿದೆ.

ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ವ್ಯಕ್ತ ಪಡಿಸಿದ ಅನಿಸಿಕೆಗಳು/ಅಭಿಪ್ರಾಯಗಳು/ಆಕ್ಷೇಪಗಳು ಈ ಕೆಳಗಿನಂತಿವೆ.

**1. ಮಾಳೇಶ ಬೋಮ್ಮನಾಳ್, ಬೋಮ್ಮನಾಳ್ ಗ್ರಾಮ, ರಾಜ್ಯ ಸಂಚಾಲಕರು, ಅಂಬೇಡ್ಕರ್ ದಲಿತ ಸೇನಾ:-**

ಇಲ್ಲಿ ಮೈನಿಂಗ್ (mining) ಮಾಡಬಾರದೆಂದು ಈಗಾಗಲೇ ಜಿಲ್ಲಾಧಿಕಾರಿಗಳವರಿಗೆ ಮನವಿಯನ್ನು ಸಲ್ಲಿಸಿದ್ದೇವೆ. ಈ ಪ್ರದೇಶವನ್ನು ಕೃಷಿ ವ್ಯವಸಾಯ ಮಾಡುವುದಕ್ಕಾಗಿ ರೈತರಿಂದ ಖರೀದಿ ಮಾಡಿರುತ್ತಾರೆ ಗಣಿಗಾರಿಕೆಗಾಗಿ ಖರೀದಿ ಮಾಡಿರುವುದಿಲ್ಲ. ಈ ಪ್ರದೇಶದ ಎಲ್ಲಾ ರೈತರು ಮೋಟರ್‌ಗಳನ್ನು ಬಳಸಿ ನೀರು ಉಪಯೋಗಿಸುವವರು ಅದ್ದರಿಂದ ಈ ಪ್ರದೇಶದಲ್ಲಿ ಮರಳು ಗಣಿಗಾರಿಕೆ ಬೇಡ ಹಾಗೂ ಇದರಿಂದ ನೀರಿನ ಗುಣಮಟ್ಟವು ಸಹ ಕಡಿಮೆಯಾಗುತ್ತದೆ ಆದ್ದರಿಂದ ಇಲ್ಲಿ ಯಾವುದೇ ರೀತಿಯ ಮೈನಿಂಗ್ ಮಾಡುವ ಅವಶ್ಯಕತೆಯಿಲ್ಲ ಬೇಕಾದರೆ ಹಲವು ನದಿಗಳ ಬಳಿ ಮೈನಿಂಗ್ ಮಾಡಬಹುದು ಹಾಗೂ ನಮ್ಮ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಮರಳಿನ ಅವಶ್ಯಕತೆ ಇದೆ ಎಂದರೆ ಮಾಡಬಹುದಾಗಿತ್ತು ಆದರೆ ಈಗಾಗಲೇ ಇಲ್ಲಿ 14 ಮರಳು ಕ್ವಾರಿಗಳಿವೆ ಹಾಗೂ ಇದ್ದರಿಂದ ಯಾವುದೇ ರೀತಿಯ ಉದ್ಯೋಗ ಸೃಷ್ಟಿಯಾಗುವುದಿಲ್ಲ ಮತ್ತು ಅದರ ಅವ್ಯಶಕತೆಯು ಇಲ್ಲ ಹಾಗೂ ಈ ಮೈನಿಂಗ್ ಮಾಡಲು ಅವಕಾಶ ಮಾಡಬಾರದು. ಬಹುತೇಕ ರೈತರ ಸಂಘ ಮತ್ತು ರೈತರು ಈ ಯೋಜನೆಯನ್ನು ಅಕ್ಷೇಪ ವ್ಯಕ್ತಪಡಿಸಿರುತ್ತಾರೆ ಎಂದು ತಿಳಿಸಿದರು.

**2. ತಮ್ಮಣ್ಣ ಬೋಮ್ಮನಾಳ್, ಬೋಮ್ಮನಾಳ್ ಗ್ರಾಮ:-**

ರೈತರ ಪರವಾಗಿ ಹಾಗೂ ವೈಯಕ್ತಿಕವಾಗಿ ಉಸುಕು ಗಣಿಗಾರಿಕೆಯನ್ನು ನಾವು ವಿರೋಧಿಸುತ್ತೇವೆ ಕಾರಣ ಈ ಗಣಿಗಾರಿಕೆಯ ಅವ್ಯಶಕತೆಯು ಒಬ್ಬ ವ್ಯಕ್ತಿಗೂ ಹಾಗೂ ಒಬ್ಬ ರೈತನಿಗೂ ಸಹ ಇರುವುದಿಲ್ಲ ಇದರಿಂದ ಯಾವುದೇ ಲಾಭವೂ ಸಹ ನಮಗೆ ಇಲ್ಲ, ಗಣಿಗಾರಿಕೆಯವರು ಶಕ್ತಿ ಬಿಂದು ಪ್ರದರ್ಶನದಲ್ಲಿ ತಿಳಿಸಿದಂತೆ ರೈತರಿಗೆ ಉದ್ಯೋಗವನ್ನು ನೀಡುತ್ತೇವೆ ಎಂದು ಹೇಳಿದರು ಆದರೆ ಇದೆಲ್ಲಾ ಬೂಟಾಟಿಕೆಯ ಮಾತುಗಳಾಗಿವೆ. ಈ ಹಿಂದೆ ಮಾಳೇಶ ಹೇಳಿದಂತೆ ಸ್ಟೀಲ್ ಫ್ಯಾಕ್ಟರಿ ಹಾಕುವುದರಿಂದ ಸಾವಿರಾರು ಜನರಿಗೆ ಉದ್ಯೋಗ ಸೃಷ್ಟಿಯಾಗುತ್ತದೆ ಎಂದು ಮಾನ್ಯ ಎಡಿಸಿ ಯವರಲ್ಲಿ ಮನವಿ ಮಾಡಿಕೊಳ್ಳುತ್ತೇವೆ ಇಲ್ಲವಾದರೆ ಸೋಲಾರ್ ಪ್ಲ್ಯಾಂಟ್ ಹಾಕುವುದರಿಂದ ರೈತರಿಗೆ ಅನುಕೂಲವಾಗುತ್ತದೆ ಅದನ್ನು ಬಿಟ್ಟು ಬೋಮ್ಮನಾಳ್ ಹಳ್ಳಿಯಲ್ಲಿರುವ ಉಸುಕನ್ನು ಬಾಂಬೆ, ಪುಣೆ ಹಾಗೂ ಬೆಂಗಳೂರಿಗೆ ಸಾಗಿಸಲು ಇಲ್ಲಿ ಗಣಿಗಾರಿಕೆಯನ್ನು ಸ್ಥಾಪಿಸುವ ಅವಶ್ಯಕತೆ ಇಲ್ಲ ಹಾಗೂ ರೆವಿನ್ಯೂ ಇಲಾಖೆಯ ಪ್ರಕಾರ ಹಳ್ಳಕ್ಕೆ ಸಂಬಂಧಿಸಿದ ಜಾಗದಲ್ಲಿ ಪ್ರಸ್ತುತ ಜಾಗ ಇದೆ ಹಾಗೂ ಇದು ಹಳ್ಳದ ಮಧ್ಯದಲ್ಲಿರುತ್ತದೆ, ಒಂದು ವೇಳೆ ಇಲ್ಲಿ ಮರಳು ಗಣಿಗಾರಿಕೆ ಮಾಡಿದರೆ ಭೂಮಿ ತಗ್ಗು ಪ್ರದೇಶವಾದರೆ ಮುಂದೆ ಇರುವಂತಹ ರೈತರ ಹೊಲಗಳು ಶೇಕಡಾ 100 ಕ್ಕೆ 100 ರಷ್ಟು ಕೊಚ್ಚಿಕೊಂಡು ಹೋಗುತ್ತದೆ. ಇದಕ್ಕೆ ತಾಜಾ ಉದಾಹರಣೆ ಎಂದರೆ 2009ರ ಇಸವಿಯಲ್ಲಿ ಉಂಟಾದ ಪ್ರವಾಹದಿಂದ ಒಂದು ಹೊಸ ಹಳ್ಳ ಸೃಷ್ಟಿಯಾಗಿರುತ್ತದೆ ಹಾಗೂ ಕಳಕಳಿಯ ಮನವಿ ಏನೆಂದರೆ

ಕೆಳಮಟ್ಟದ ಅಧಿಕಾರಿಗಳನ್ನು ಕಳುಹಿಸಿದರೆ ನಾವು ತೋರಿಸುತ್ತೇವೆ ಇಲ್ಲದಿದ್ದರೆ ಸದ್ಯ ಬಂದರೂ ತೋರಿಸುತ್ತೇವೆ. ಯಾವುದೇ ಕಾರಣಕ್ಕೂ ಇಲ್ಲಿ ಗಣಿಗಾರಿಕೆಯನ್ನು ಮಾಡಿದರೆ ರಕ್ತಪಾತ ಮತ್ತು ರೈತರ ಮಾರಣಹೋಮ ನಡೆಯುತ್ತದೆ ಎಂದು ತಿಳಿಸಿದರು.

**3. ಸಿದ್ದಯ್ಯ, ರೈತರ ಸಂಘದ ಕಾರ್ಯದರ್ಶಿ ಬೋಮ್ಮನಾಳ್ ಗ್ರಾಮ:**

ಗಣಿಗಾರಿಕೆದಾರರು ತಿಳಿಸಿದಂತ ಮಾಹಿತಿಯು ನನಗೆ ತಿಳಿದಿರುವುದಿಲ್ಲ ಇದನ್ನು ನಿಮ್ಮ ಅನುಕೂಲಕ್ಕೆ ತಕ್ಕಂತೆ ನೀವು ಮಾಡಿಕೊಂಡಿದ್ದೀರಿ ಆದರೆ ರೈತರಿಗೆ ಹಾಗೂ ಸುತ್ತಮುತ್ತಲಿನ ಹಳ್ಳಿಗಳಿಗೆ ಅನುಕೂಲವಾಗುತ್ತದೆಯೇ ? ಎಂದು ಪ್ರಶ್ನಿಸಿದರು. ಈ ಗಣಿಗಾರಿಕೆಯನ್ನು ಸ್ಥಾಪಿಸಲು ನಿಮಗೆ ರೈತರ ಭೂಮಿನೇ ಬೇಕಾ ? ಈ ಸ್ಥಳವು ಫಲವತ್ತಾದ ಭೂಮಿಯಾಗಿರುತ್ತದೆ ಆದ್ದರಿಂದ ನಾವು ರೈತರ ಪರವಾಗಿ ಈ ಗಣಿಗಾರಿಕೆಯನ್ನು ಮಾಡಲು ಬಿಡುವುದಿಲ್ಲ ಎಂದು ಮನವಿ ಮಾಡಿಕೊಂಡರು. ಮುಂದುವರೆದು, ನೀವು ರೈತರನ್ನು ಹಾಳು ಮಾಡುವ ಕೆಲಸ ಏಕೆ ಮಾಡುತ್ತೀರಿ? ರೈತರಿಗೆ ಅನುಕೂಲವಾಗುವಂತಹ ಕೆಲಸಗಳನ್ನು ಮಾಡಿ, ಈ ಗಣಿಗಾರಿಕೆಯಿಂದ ವಾಯು ಮಾಲಿನ್ಯ ಹಾಗೂ ಶಬ್ದ ಮಾಲಿನ್ಯ ಹಾಗೂ ಆರೋಗ್ಯ ಸಮಸ್ಯೆ ಉಂಟಾಗುವುದು ಹಾಗೂ ಧೂಳಿನಿಂದ ಬೆಳೆ ಹಾನಿ ಆಗುವುದರಿಂದ ನಾನು ಈ ಯೋಜನೆಯನ್ನು ತಿರಸ್ಕರಿಸುತ್ತಿದ್ದೇನೆ ಎಂದು ತಿಳಿಸಿದರು.

**4. ಮಹೇಶ, ಬೋಮ್ಮನಾಳ ಗ್ರಾಮ, ರೈತ ಸಂಘದ ಅಧ್ಯಕ್ಷರು:-**

ಮರಳು ಗಣಿಗಾರಿಕೆ ಬಗ್ಗೆ ತನಿಖೆ ಮಾಡಿದ್ದೀರಿ ಆದರೆ ರೈತರ ಬಗ್ಗೆ ಯಾರು ತನಿಖೆ ಮಾಡಿದ್ದೀರಾ? ಎಂದು ಕೇಳಿದರು. ಈ ಗಣಿಗಾರಿಕೆಯು ಊರಿಗೆ ಹತ್ತಿರವಿದೆ. ಇದರಿಂದ ಹೊಗೆ ಮತ್ತು ಧೂಳು ಬರುತ್ತದೆಂದು ಯಾರಾದರೂ ಆಲೋಚನೆ ಮಾಡಿದ್ದೀರಾ? ರೈತರಿಗೆ ತೊಂದರೆಯಾಗುವುದರಿಂದ ನಾನು ಈ ಯೋಜನೆಯನ್ನು ತಿರಸ್ಕರಿಸುತ್ತಿದ್ದೇನೆ ಎಂದು ತಿಳಿಸಿದರು.

**5. ಪ್ರಭಾಕರ್ ಪಾಟೀಲ, ಇಂಗಳದಾಳ ಗ್ರಾಮ, ಕರ್ನಾಟಕ ರೈತರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ :**

ಎಡಿಸಿ ಮತ್ತು ತಹಶೀಲ್ದಾರ ಸಾಹೇಬರಿಗೆ ಮನವಿ ಮಾಡುವುದೇನೆಂದರೆ, ಇಲ್ಲಿ ವೇದಿಕೆಯನ್ನು ಹಾಕಿರುವುದೇ ತಪ್ಪು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು ಈ ಪ್ರದೇಶದ ಸುತ್ತಲೂ ಸುಮಾರು 100 ಎಕರೆ ಜಮೀನುಗಳಿರುತ್ತವೆ ಆದ್ದರಿಂದ ರೈತರಿಗೆ ತುಂಬಾ ಸಮಸ್ಯೆ ಉಂಟಾಗುತ್ತದೆ. ಇದನ್ನು ಸುತ್ತಮುತ್ತಲಿನ ಹಳ್ಳಿಗಳು ಹಾಗೂ ಕರ್ನಾಟಕ ರೈತ ಸಂಘದ ಪರವಾಗಿ ತಿರಸ್ಕರಿಸುತ್ತಿದ್ದೇವೆ ಮತ್ತು ಮಳೆಗಾಲದ ಸಮಯದಲ್ಲಿ ರಸ್ತೆಗಳು, ಗದ್ದೆಗಳು ಹಾಳಾಗುತ್ತವೆ ಹಾಗೂ ಈ ಸಮಯದಲ್ಲಿ ಧೂಳು ಹೆಚ್ಚಾಗುತ್ತದೆ ಅದ್ದರಿಂದ ರೈತರು ಬೆಳೆದ ಹತ್ತಿಯ ಮೇಲೆ ಧೂಳು ಬೀಳುತ್ತದೆ ಇದು ರೈತರಿಗೆ ತುಂಬಾ ನೋವಾದ ಸಂಗತಿಯಾಗಿರುತ್ತದೆ. ಆದ ಕಾರಣ ನಾನು ಆಕ್ಷೇಪ ವ್ಯಕ್ತಪಡಿಸಲು ಇಚ್ಛಿಸಿತ್ತೇನೆ. ಇದನ್ನು ಮುಂದುವರೆಸಿದರೆ ನಾವು ಹೋರಾಟ ಮಾಡಬೇಕಾಗುತ್ತದೆ ಎಂದು ತಿಳಿಸಿದರು.

6. ಯೇಶಪ್ಪಾ ಬೋಮ್ಮನಾಳ್, ಬೋಮ್ಮನಾಳ್ ಗ್ರಾಮ :-

ಬೋಮ್ಮನಾಳ ಇಲ್ಲಿಂದ 1 ಕಿ.ಮೀ ದೂರವಿರುವುದಿಲ್ಲ. ಭೂಮಿ ಮಾರಿಕೊಳ್ಳಲು ಕಾರಣವೆಂದರೆ ನಮಗೆ ಓಡಾಡಲು ಒಳ್ಳೆಯ ದಾರಿ ಇಲ್ಲ ಹಾಗೂ ಘೂಲ್ (Bridge/ಸೇತುವೆ) ಇಲ್ಲದ ಕಾರಣ ನಾನು ಹಾಗೂ ನನ್ನ ಅಣ್ಣ-ತಮ್ಮಂದಿರು ಸಹ ಭೂಮಿಯನ್ನು ಮಾರಿಕೊಳ್ಳಲಾಗಿದೆ. ಉದ್ದೇಶ ಘೂಲ್ (Bridge/ಸೇತುವೆ) ಆಗಬೇಕು. ಅದನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ಮನವಿ ಮಾಡಿಕೊಳುತ್ತಿದ್ದೇನೆ. ಎಂದು ತಿಳಿಸಿದರು.

7. ಭೂದಯ್ಯಾ ಸ್ವಾಮಿ, ಗಬ್ಬೂರು:-

ಗಣಿಗಾರಿಕೆ ಮಾಡಲು ಈ ಪ್ರದೇಶವು ಯೋಗ್ಯವಲ್ಲ ಇದರಿಂದ ರೈತರಿಗೆ ತೊಂದರೆಯಾಗುತ್ತದೆ. ರಸ್ತೆಗಳು ಸರಿಯಿಲ್ಲ, ನೀವು ಸ್ಥಳ ನೋಡಿ ಬೋಮ್ಮನಾಳ್‌ನಲ್ಲಿ ಸಭೆ ಮಾಡಬಹುದಾಗಿತ್ತು. ಆಗ ಬಹಳ ರೈತರು ಇನ್ನೂ ಸೇರುತ್ತಿದ್ದರು ಮತ್ತು ಇಲ್ಲಿ ನಮ್ಮ ರೈತ ಸಂಘದ ವಿರೋಧವಿದೆ ಮರಳು ಗಣಿಗಾರಿಕೆ ಮಾಡಲು ಅವಕಾಶ ಕೊಡುವುದಿಲ್ಲ ಎಂದು ತಿಳಿಸಿದರು.

8. ತಿಪ್ಪಣ್ಣ, ಬೋಮ್ಮನಾಳ್:

ಒಂದು ಎಕರೆ ಹೊಲ ಇದೆ ಮುಂದೆ ಓಡಾಡಲು ತುಂಬಾ ತೊಂದರೆಯಾಗುತ್ತದೆ ಆದ ಕಾರಣ ಮುಂದೆ ತೊಂದರೆಯಾಗುವ ಸಂಬಂಧ ಈ ಗಣಿಗಾರಿಕೆ ಬ್ಬೆಡ ಎಂದು ತಿಳಿಸಿದರು.

9. ರಾಚಪ್ಪ, ಗಬ್ಬೂರು ಗ್ರಾಮ, ಡಿಎಸ್‌ಎಸ್ ಮುಖಂಡರು ತಾಲ್ಲೂಕು ಸಂಚಾಲಕರು:-
ಗಬ್ಬೂರು ಹೋಬಳಿ ಭಾಗದ ಈ ಮರಳು ಗಣಿಗಾರಿಕೆ ಮಾಡುವುದರಿಂದ ರೈತರಿಗೆ ಮತ್ತು ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತದೆ ಆದ್ದರಿಂದ ಈ ಗಣಿಗಾರಿಕೆಯನ್ನು ಇಲ್ಲಿಗೆ ಕೈಬಿಡಬೇಕು. ಇದರಿಂದ ಜನಸಾಮಾನ್ಯರಿಗೆ ಹಾಗೂ ರೈತರಿಗೆ ಸಮಸ್ಯೆಯಾಗುತ್ತದೆ. ಸರ್ಕಾರ ನಮಗೆ ಸರಿಯಾದ ಮೂಲಭೂತ ಸೌಕಾರ್ಯಗಳನ್ನು ನೀಡಲಿಲ್ಲ ಆದರೆ ಮರಳು ಗಣಿಗಾರಿಕೆ, ಕಲ್ಲು ಗಣಿಗಾರಿಕೆ ಮಾಡುತ್ತೇವೆ ಎನ್ನುತ್ತಾರೆಯೇ? ಇದರಿಂದ ರೈತರಿಗೆ ಕೂಲಿಕಾರ್ಮಿಕರಿಗೆ ಏನು ಅನುಕೂಲವಿದೆ ? ಈ ಗಣಿಗಾರಿಕೆಯನ್ನು ಜನರು ಹಾಗೂ ಪ್ರಗತಿಪರ ಸಂಘಟನೆಗಳ ಪರವಾಗಿ ವಿರೋಧಿಸುತ್ತೇವೆ. ಈ ಯೋಜನೆಯನ್ನು ಇಲ್ಲಿಗೆ ಕೈಬಿಡಬೇಕೆಂದು ವಿನಂತಿಸಿದರು.

10. ಮಲ್ಲಯ್ಯ, ಬೋಮ್ಮನಾಳ್ ಗ್ರಾಮ:-
ಬೊಮ್ಮನಾಳ್ ಗ್ರಾಮವು 200 ಎಕರೆಗಳಾಗಿರುತ್ತದೆ ದಾರಿ ವ್ಯವಸ್ಥೆ ಇಲ್ಲವೆಂದು ಭೂಮಿಗಳನ್ನು ಮಾರಿಕೊಳ್ಳುತ್ತಿದ್ದೇವೆ. ಈಗಾಗಲೇ ಹಳ್ಳದಲ್ಲಿ ಎತ್ತರಕ್ಕೆ ನೀರು ಹರಿಯುತ್ತದೆ ಈ ಸಮಯದಲ್ಲಿ ಭೂಮಿ ಬಿತ್ತಿದರೆ ನಾವು ಖಾನಾಪುರ ಸುತ್ತುವರೆದು ಬರಬೇಕಾಗುತ್ತದೆ ಇದರಿಂದ ನೂರಾರು ಎಕರೆ ಭೂಮಿಯು ಬೀಳುಬಿದ್ದಿದೆ ಇದಕ್ಕೆ ಕಾರಣ ಭೂಮಿ ಬರಡಲ್ಲಾ, ಹೊಲಕ್ಕೆ ಹೋಗಲು ಅನುಕೂಲ ಇಲ್ಲದ ಕಾರಣ

ಬೀಳುಬಿಟ್ಟಿದ್ದೇವೆ. ಡಿಸಿ ಸಾಹೇಬರ ಗಮನಕ್ಕೆ ತರುವುದೇನೆಂದರೆ Bridge ವ್ಯವಸ್ಥೆಯನ್ನು ಮಾಡಬೇಕು. ಸುಮಾರು 150 ಎಕರೆ ಬೀಳು ಭೂಮಿ ಇದೆ. ಆದ್ದರಿಂದ ತಾವು ರೈತರಿಗೆ ಬೆಂಬಲ ನೀಡಬೇಕು ಹಾಗೂ ಹಳ್ಳ ದಾಟಲು ವ್ಯವಸ್ಥೆ ಮಾಡಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತೇನೆ ಎಂದು ತಿಳಿಸಿದರು.

**11. ಬಸವರಾಜು ಬೊಮ್ಮನಾಳ್, ಬೋಮ್ಮನಾಳ್ ಗ್ರಾಮ:-**
ನನ್ನ ಅಭಿಪ್ರಾಯವೆನೆಂದರೆ ಈ ಗಣಿಗಾರಿಕೆಯ ಪ್ರದೇಶದಲ್ಲಿ ಮೊದಲು ಸರ್ವೆ ಮಾಡಿದ್ಯಾರೂ ? ಮತ್ತು ಈ ಪ್ರದೇಶದಲ್ಲಿ ಗಣಿಗಾರಿಕೆ ಮಾಡಲು ಸೂಕ್ತವೆಂದು ಹೇಳಿದ್ಯಾರೂ ? ಹಾಗೂ ಮೊದಲು ಅನುಮತಿಯನ್ನು ಯಾರು ಕೊಟ್ಟರು ? ನನಗೆ ಈ ಕ್ಷಣವೆ ಗೊತ್ತಾಗಬೇಕು. ಆದ ಕಾರಣ ನನಗೂ ಮತ್ತು ನನ್ನ ಎಲ್ಲಾ ರೈತರಿಗೂ ನಾನು ಕೇಳಿಕೊಳ್ಳುವುದೇನೆಂದರೆ ಸರ್ಕಾರವು ಈ ಕೂಡಲೆ ಯೋಜನೆಯನ್ನು ರದ್ದು ಪಡಿಸಿ ನಮ್ಮೆಲ್ಲರಿಗೂ ನ್ಯಾಯ ದೊರಕುವಂತೆ ಮಾಡಬೇಕೆಂಬುದು ನನ್ನ ಮನವಿಯಾಗಿದೆ ಎಂದು ತಿಳಿಸಿದರು.

ಸಭಾಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸಾರ್ವಜನಿಕರಿಗೆ ಯೋಜನೆಯ ಕುರಿತು ಇನ್ನೂ ಯಾವುದಾದರೂ ಅನಿಸಿಕೆಗಳು/ಅಭಿಪ್ರಾಯಗಳು/ಆಕ್ಷೇಪಗಳು ಇದ್ದಲ್ಲಿ ವ್ಯಕ್ತಪಡಿಸಬೇಕೆಂದು ತಿಳಿಸಿದರು.

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ, ಗಬ್ಬೂರು, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ ಇವರು ಸದರಿ ಯೋಜನೆಗೆ ಆಕ್ಷೇಪಿಸಿ ಸಭಾಧ್ಯಕ್ಷರಿಗೆ ಮನವಿಯನ್ನು ಸಲ್ಲಿಸಿದರು. ಪ್ರತಿಯನ್ನು **ಅನುಬಂಧ-6** ರಲ್ಲಿ ಲಗತ್ತಿಸಲಾಗಿದೆ.

ಮುಂದುವರೆದು ಯಾವುದೇ ಸಾರ್ವಜನಿಕರು ಅನಿಸಿಕೆಗಳು/ಅಭಿಪ್ರಾಯಗಳು/ಆಕ್ಷೇಪಗಳನ್ನು ವ್ಯಕ್ತಪಡಿಸದಿದ್ದರಿಂದ ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಾರ್ವಜನಿಕ ಸಭೆಯ ನಡುವಳಿಯನ್ನು ಚಿತ್ರೀಕರಿಸಲಾಯಿತು ಮತ್ತು ಛಾಯಾಚಿತ್ರಗಳನ್ನು ತೆಗೆಯಲಾಯಿತು. ಛಾಯಾಚಿತ್ರಗಳನ್ನು **ಅನುಬಂಧ-7** ರಲ್ಲಿ ಹಾಗೂ ಚಿತ್ರೀಕರಣದ ಸಿಡಿ (CD)ಯನ್ನು **ಅನುಬಂಧ-8** ರಲ್ಲಿ ಲಗತ್ತಿಸಲಾಗಿದೆ.

ಮುಂದುವರೆದು, ಜಿಲ್ಲಾಧಿಕಾರಿಗಳ ಕಾರ್ಯಾಲಯ, ರಾಯಚೂರು ಇವರು ಪತ್ರ ಸಂಖ್ಯೆ: ಕಂದಾಯ/ಗಣಿ/2019-20/1831 ದಿನಾಂಕ: 24-07-2020 ರ ಪತ್ರದಲ್ಲಿ ದೇವದುರ್ಗ ತಾಲ್ಲೂಕಿನ ಗಬ್ಬೂರು ಹೋಬಳಿಯ ಕೋಳೂರು ಸೀಮಾಂತರದಲ್ಲಿ ಹೊರೈಜೆನ್ ಮೈನಿಂಗ್‌ರವರಿಂದ ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆ ಮಾಡುವ ಸಂಬಂಧ ಶ್ರೀ ಸುನೀಲ ಸಾ// ಬೋಮ್ಮನಾಳ್, ಶ್ರೀ ಅಂಜಿನೆಯ ಸಾ// ಬೋಮ್ಮನಾಳ್, ಶ್ರೀ ಚಂದ್ರಪ್ಪ ಸಾ// ಬೋಮ್ಮನಾಳ್, ಶ್ರೀ ಬಂಡೀಶ್ ಸಾ// ಹೇಮನಾಳ್, ಶ್ರೀ ನಾಗರಾಜ ಸಾ// ಖಾನಾಪೂರ, ಶ್ರೀ ಸಿಮಾನ್ ಸಾ// ಬೋಮ್ಮನಾಳ್, ಶ್ರೀ

ಹೊನ್ನೂರಪ್ಪ, ಶ್ರೀ ಲಚುಮಣ್ಣ ಹಾಗೂ ಶ್ರೀ ಸುರೇಶ ರವರು ಸದರಿ ಕೈಗಾರಿಕಾ ಉದ್ಯಮದಿಂದ ಗ್ರಾಮದಲ್ಲಿ ಉದ್ಯಮ ಸೃಷ್ಟಿ, ಚಿಕ್ಕ ಉದ್ಯಮಕ್ಕೆ ಬೆಂಬಲ ಹ್ಹಾಗೂ ಸ್ಫೂರ್ತಿ ಉಂಟಾಗುತ್ತದೆ, ಗ್ರಾಮ ಪಂಚಾಯತಿಗೆ ಆದಾಯ ಕೂಡ ಸೃಜನೆಯಾಗುತ್ತದೆ ಮತ್ತು ಉದ್ಯಮದಿಂದ ನೆರವು ಉಂಟಾಗುತ್ತದೆ ಎಂದು ತಿಳಿಸಿರುವ 09 ಮನವಿಗಳನ್ನು ಲಗತ್ತಿಸಿ ಕಳುಹಿಸಿರುತ್ತಾರೆ. ಸದರಿ ಪತ್ರವನ್ನು **ಅನುಬಂಧ-9** ರಲ್ಲಿ ಲಗತ್ತಿಸಲಾಗಿದೆ.

ಸದರಿ ಸಭೆಯಲ್ಲಿ ಸಾರ್ವಜನಿಕರು ಬಳಸಿರುವ ಅಸಂಬದ್ಧ ಪದಗಳು ಸಿ.ಡಿ (C.D)ಯಲ್ಲಿ ಮುದ್ರಿತವಾಗಿದ್ದು, ನಡುವಳಿಗಳಲ್ಲಿ ದಾಖಲಿಸಿರುವುದಿಲ್ಲ.

ಲಗತ್ತು: ಮೇಲಿನಂತೆ,

23/07/2020

(ಶ್ರೀ. ದುರಗೇಶ, ಕೆ.ಆ.ಸೇ)
ಅಪರ ಜಿಲ್ಲಾಧಿಕಾರಿಗಳು ಮತ್ತು
ಅಪರ ಜಿಲ್ಲಾ ದಂಡಾಧಿಕಾರಿಗಳು
ರಾಯಚೂರು.

(ಶ್ರೀ.ಎಂ.ಶ್ರೀಧರ್)
ಹಿರಿಯ ಪರಿಸರ ಅಧಿಕಾರಿ
ವಲಯ ಕಛೇರಿ,
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ
ಮಂಡಳಿ,ಬಳ್ಳಾರಿ.

(ಶ್ರೀ.ವಿರ ವಿಶ್ವನಾಥ)
ಹಿರಿಯ ಭೂ-ವಿಜ್ಞಾನಿಗಳು,
ಗಣಿ ಮತ್ತು ಭೂವಿಜ್ಞಾನ ಇಲಾಖೆ,
ರಾಯಚೂರು